**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 3049/2021**

ದಿನಾಂಕ : 24.01.2025

| | | | |
|---|---|---|---|
| ಹೆಸರು | : | ಪ್ರಭಾಕರ್ ಯಲ್ಲಪ್ಪ ಉಲ್ಲಾಳ್ | ಸಿಡಬ್ಲ್ಯೂ - 18 |
| ತಂದೆ ಹೆಸರು | : | ಯಲ್ಲಪ್ಪ ಉಲ್ಲಾರ್ | ಪಿ ಡಬ್ಲ್ಯೂ - 05 |
| ವಯಸ್ಸು | : | 53 ವರ್ಷ | |
| ಉದ್ಯೋಗ | : | ಪೊಲೀಸ್ ಇನ್ಸ್ ಪೆಕ್ಟರ್ | |
| ವಾಸಸ್ಥಳ | : | ಬಳ್ಳಾರಿ | ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ. ರವರಿಂದಃ**

ನಾನು13.08.2021 ರಿಂದ 21.06.2022 ಇಲ್ಲಿಯವರೆಗೆ ನಾನು ತಳಕ ವ್ಯತ್ತದ ಪೊಲೀಸ್ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.13.08.2021 ರಂದು ಪ್ರಕರಣದ ಕಡತವನ್ನು ಚಾಸಾ-16 ರವರಿಂದ ಮುಂದಿನ ತನಿಖೆಗಾಗಿ ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ.

ದಿನಾಂಕ 20.09.2021 ರಂದು ಮೃತ ಸುಶ್ಮಿತಾಳ ಪಿ ಎಂ ವರದಿಯನ್ನು ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ಸಾಕ್ಷಿಗೆ ನಿಪಿ.13 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿಃ 13(ಎ) ಅಂತ ಗುರುತಿಸಲಾಯಿತು.

ದಿನಾಂಕ 11.10.2021 ರಂದು ವಾಹನದ ಐಎಂ ವಿ ವರದಿಯನ್ನು ಚಿತ್ರದುರ್ಗದ ಆರ್.ಟಿ ಓ ಕಚೇರಿಯಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿಪಿ.14 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿಃ 14(ಎ) ಅಂತ ಗುರುತಿಸಲಾಯಿತು.

ಅದೇ ದಿನ ತನಿಖೆ ಪೂರ್ಣ ಗೊಂಡು ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷಿ ಪುರಾವೆಗಳು ಇದ್ದ ಕಾರಣಕ್ಕೆ ಅವರ ವಿರುದ್ದ ದೋಷರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

<u>**ಪಾಟೀ ಸವಾಲು : ಶ್ರೀ ವಿ.ಜಿ.ಪಿ., ಆರೋಪಿ ಪರ ವಕೀಲರಿಂದ :**</u>

ದಿನಾಂಕ 20.09.2021 ರಂದು ಮೃತ ಸುಶ್ಮಿತಾಳ ಪಿ ಎಂ ವರದಿಯನ್ನು ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 11.10.2021 ರಂದು ವಾಹನದ ಐಎಂ ವಿ ವರದಿಯನ್ನು ಚಿತ್ರದುರ್ಗದ ಆರ್.ಟಿ ಓ ಕಚೇರಿಯಿಂದ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ತನಿಖೆಯನ್ನು ಸರಿಯಾಗಿ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಚಾಸಾ-1 ರವರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದೋಷರೋಪಣೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ**</u> : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

C/c ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.